# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **668** |
| ಸದಸ್ಯರ ಹೆಸರು | : | ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 22-07-2024 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೃಷಿ ಗೃಹ ಬೋರ್ ವೆಲ್ ಮತ್ತು ವಾಣಿಜ್ಯ ವಿಭಾಗಗಳಲ್ಲಿ ಇತರೆ ಉಪಯೋಗಗಳಿಗೆ ಹೊಸದಾಗಿ ವಿದ್ಯುತ್ ಸಂಪರ್ಕ ನೀಡಲು ಇರುವ ಮಾನದಂಡಗಳೇನು; | ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಹೊರಡಿಸಿರುವ Conditions of Supply of Electricity of Distribution Licensees in the State of Karnataka ನಿಯಮಾವಳಿಯನುಸಾರ ಕುಡಿಯುವ ನೀರಿನ, ಕೊಳವೆ ಬಾವಿ, ಗೃಹ, ಹಾಗೂ ವಾಣಿಜ್ಯ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ನೀಡಲಾಗುತ್ತಿದೆ.<br>ಮೊಬೈಲ್ ಟವರ್‌ಗಳಿಗೆ ವಿದ್ಯುತ್ ಸಂಪರ್ಕ ಕೋರಿದ್ದಲ್ಲಿ, ಷರತ್ತು 4.02ರಲ್ಲಿ ತಿಳಿಸಿರುವಂತೆ ಅರ್ಜಿದಾರರು ಸೂಕ್ತ ದಾಖಲೆಗಳನ್ನು ಸಲ್ಲಿಸಿದ ನಂತರ, ಷರತ್ತು 9.04 ರನ್ವಯ ವಿದ್ಯುತ್ ಸಂಪರ್ಕ ನೀಡಲಾಗುತ್ತಿದೆ.<br>ಮನೆ, ಅಂಗಡಿಗಳಿಗೆ ನಿಯಮಾವಳಿ/ ಷರತ್ತು 5.00 ಅಡಿಯಲ್ಲಿ ವಿದ್ಯುತ್ ಸಂಪರ್ಕ ನೀಡಲಾಗುತ್ತಿದೆ. |
| ಆ) | ಕೃಷಿ/ಗೃಹ/ವಾಣಿಜ್ಯ ವಿಭಾಗದ ಟ್ರಾನ್ಸ್ ಫಾರ್ಮರ್ ದುರಸ್ತಿ ಕೈಗೊಳ್ಳಲು ಇರುವ ಮಾರ್ಗಸೂಚಿಗಳಾವುವು; | ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿಯಮಾನುಸಾರ ವಿಫಲಗೊಂಡ ಪರಿವರ್ತಕಗಳನ್ನು ನಗರ ಪ್ರದೇಶಗಳಲ್ಲಿ 24 ಗಂಟೆಯೊಳಗೆ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ 72 ಗಂಟೆಯೊಳಗೆ ಬದಲಾಯಿಸಲು ಕ್ರಮ ಕೈಗೊಳ್ಳಲಾಗುತ್ತಿರುತ್ತದೆ. |
| ಇ) | ರೈತರ ಟ್ರಾನ್ಸ್ ಫಾರ್ಮರ್ ದುರಸ್ತಿಗೊಳಿಸಲು ರೈತರಿಂದ ಹಣ ಪಡೆಯುತ್ತಿರುವ ಬಗ್ಗೆ ಎಷ್ಟು ದೂರುಗಳು ಸ್ವೀಕೃತವಾಗಿವೆ; (ತಾಲ್ಲೂಕುವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ರೈತರ ಟ್ರಾನ್ಸ್ ಫಾರ್ಮರ್ ದುರಸ್ತಿಗೊಳಿಸಲು ರೈತರಿಂದ ಹಣ ಪಡೆಯುತ್ತಿರುವ ಬಗ್ಗೆ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ. |

<table>
<tr>
<td>ಈ)</td>
<td>ಗೃಹಲಕ್ಷ್ಮೀ ಯೋಜನೆಯಡಿ ಎಷ್ಟು ಫಲಾನುಭವಿಗಳು ಆಯ್ಕೆಯಾಗಿದ್ದಾರೆ; ಮತ್ತು ಉಚಿತ ವಿದ್ಯುತ್ ಬಿಲ್ ಮೊತ್ತವನ್ನು ಸರ್ಕಾರಕ್ಕೆ ಎಷ್ಟು ಪಾವತಿಸಲಾಗಿದೆ; (ವಿವರ ನೀಡುವುದು)</td>
<td>ರಾಜ್ಯದಲ್ಲಿ ಗೃಹಜ್ಯೋತಿ ಯೋಜನೆಯಡಿ 200 ಯೂನಿಟ್ ಉಚಿತ ವಿದ್ಯುತ್ ಪಡೆಯಲು ಆಯ್ಕೆಯಾದ ಗ್ರಾಹಕರಿಗೆ ಸರ್ಕಾರ ಪಾವತಿ ಮಾಡಿದ ಹಣದ ಮೊತ್ತದ ವಿವರಗಳು ಕೆಳಕಂಡಂತಿವೆ:
<table>
<tr><th>ಕಂಪನಿ</th><th>ಗೃಹಜ್ಯೋತಿ ಯೋಜನೆಯಡಿಯಲ್ಲಿ ಉಚಿತ ವಿದ್ಯುತ್ ಪಡೆದ ಗ್ರಾಹಕರ ಸಂಖ್ಯೆ ( ಜೂನ್ 2024ರ ಅಂತ್ಯಕ್ಕೆ)</th><th>ಸರ್ಕಾರ ಪಾವತಿ ಮಾಡಿದ ಮೊತ್ತ (ರೂ. ಕೋಟಿಗಳಲ್ಲಿ ( 2023-24 ರಿಂದ 2024-25ನೇ ಸಾಲಿನ ಜೂನ್ 2024ರ ಅಂತ್ಯಕ್ಕೆ)</th></tr>
<tr><td>ಬೆಸ್ಕಾಂ</td><td>6525399</td><td>3883</td></tr>
<tr><td>ಮೆಸ್ಕಾಂ</td><td>1578346</td><td>897</td></tr>
<tr><td>ಸೆಸ್ಕ್</td><td>2245540</td><td>888</td></tr>
<tr><td>ಹೆಸ್ಕಾಂ</td><td>3262136</td><td>1546</td></tr>
<tr><td>ಜೆಸ್ಕಾಂ</td><td>1920650</td><td>993</td></tr>
<tr><td>ಹುಕ್ಕೇರಿ</td><td>87177</td><td>33</td></tr>
<tr><td>ಒಟ್ಟು</td><td>15619248</td><td>8240</td></tr>
</table>
</td>
</tr>
</table>

ಸಂಖ್ಯೆ: ಎನರ್ಜಿ 197 ಇಬಿಎಸ್ 2024

(ಕೆ.ಜೆ.ಜಾರ್ಜ್)
ಇಂಧನ ಸಚಿವರು